# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಯಚೂರು ವಿಶ್ವವಿದ್ಯಾಲಯಕ್ಕೆ ಬೋಧಕ ಹುದ್ದೆಗಳನ್ನು ಸೃಜಿಸಲು ಅನುಮತಿ ನೀಡುವ ಬಗ್ಗೆ.

ಓದಲಾಗಿದೆ: ಕುಲಸಚಿವರು, ರಾಯಚೂರು ವಿಶ್ವವಿದ್ಯಾಲಯ ಇವರ ಪತ್ರ ಸಂ. ರಾವಿ/ಆಡಳಿತ/2021-22/27, ದಿನಾಂಕ: 16-06-2021

ಪ್ರಸ್ತಾವನೆ:-

ಮೇಲೆ ಓದಲಾದ ಪತ್ರದಲ್ಲಿ ಕುಲಸಚಿವರು, ರಾಯಚೂರು ವಿಶ್ವವಿದ್ಯಾಲಯ ಇವರು ಸರ್ಕಾರದ ಅಧಿಸೂಚನೆ ಸಂ. ಇಡಿ 40 ಯುಜಿವಿ 2020, ದಿನಾಂಕ: 27-07-2020ರನ್ವಯ ಗುಲ್ಬರ್ಗ ವಿಶ್ವವಿದ್ಯಾಲಯವನ್ನು ವಿಭಜಿಸಿ ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳನ್ನೊಳಗೊಂಡಂತೆ ನೂತನವಾಗಿ ರಾಯಚೂರು ವಿಶ್ವವಿದ್ಯಾಲಯವು ಅಧಿಕೃತವಾಗಿ ದಿನಾಂಕ: 01-08-2020ರಿಂದ ಅಸ್ತಿತ್ವಕ್ಕೆ ಬಂದಿದ್ದು, ನೂತನವಾಗಿ ಸ್ಥಾಪನೆಯಾಗಿರುವ ರಾಯಚೂರು ವಿಶ್ವವಿದ್ಯಾಲಯಕ್ಕೆ ಒಟ್ಟು 25 ಸ್ನಾತಕೋತ್ತರ ವಿಭಾಗಗಳಿಗೆ 25 ಪ್ರಾಧ್ಯಾಪಕ, 50 ಸಹ ಪ್ರಾಧ್ಯಾಪಕ ಮತ್ತು 100 ಸಹಾಯಕ ಪ್ರಾಧ್ಯಾಪಕ ಅಂದರೆ, ಒಟ್ಟು 175 ಬೋಧಕ ಹುದ್ದೆಗಳನ್ನು ಮಂಜೂರು ಮಾಡಿ ತುಂಬಿಕೊಳ್ಳಲು ಅನುಮತಿ ನೀಡುವಂತೆ ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ವಿಶ್ವವಿದ್ಯಾಲಯಕ್ಕೆ ಅಗತ್ಯವಿರುವ ಬೋಧಕ ಹುದ್ದೆಗಳನ್ನು ಮಂಜೂರು ಮಾಡಲು ತೀರ್ಮಾನಿಸಿದ್ದು, ಅದರಂತೆ, ಈ ಕೆಳಕಂಡ ಆದೇಶ.-

**ಸರ್ಕಾರದ ಆದೇಶ ಸಂಖ್ಯೆ: ಇಡಿ 32 ಯುಜಿವಿ 2021, ಬೆಂಗಳೂರು**

**ದಿನಾಂಕ: 14-07-2022**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ನೂತನವಾಗಿ ಸ್ಥಾಪನೆಯಾಗಿರುವ ರಾಯಚೂರು ವಿಶ್ವವಿದ್ಯಾಲಯಕ್ಕೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಹೊಸದಾಗಿ ಒಟ್ಟು 31 ಹುದ್ದೆಗಳನ್ನು ಸೃಜಿಸಲು ಸರ್ಕಾರವು ಅನುಮತಿ ನೀಡಿ ಆದೇಶಿಸಿದೆ.

| Sl.No. | Department | Professor | Associate professor | Assistant Professor | Remarks |
|---|---|---|---|---|---|
| 1 | English | - | 01 | 02 | No professor has been created as already – 01 professor is working in Kannada Dept. |
| 2 | Urdu and Persian | - | - | - | |
| 3 | Economics | 01 | - | 02 | 01 Professor has been created in Economics based on student strength who can act as Dean of Social Studies |
| 4 | Gender Studies/ Women Studies | - | - | - | |
| 5 | History and Archaeology | - | - | 02 | |
| 6 | Journalism and Mass communication | - | - | 01 | |
| 7 | Library and Information Science | - | - | - | |
| 8 | Political Science | - | 01 | 02 | |
| 9 | Social Work | - | - | 02 | |
| 10 | Sociology | - | - | 02 | |

ಸಾರ್ವಜನಿಕ ಮಾಹಿತಿ ಅಧಿಕಾರಿ
ಆರ್.ಟಿ.ಐ. ಕೋಶ, ರಾಯಚೂರು ವಿಶ್ವವಿದ್ಯಾಲಯ,
ರಾಯಚೂರು

...2

| | | | | | |
|---|---|---|---|---|---|
| 11 | Chemistry | - | 01 | 02 | 01 Professor has been created in commerce who can act as Dean of Science and Technology |
| 12 | Computer Science | - | - | 01 | |
| 13 | Mathematics | | - | 02 | |
| 14 | Physics | - | - | 02 | |
| 15 | Commerce | 01 | | 01 | |
| 16 | Zoology | - | 01 | 01 | |
| 17 | Microbiology | - | 01 | 01 | |
| 18 | Botany | - | - | 01 | |
| | Total | 02 | 05 | 24 | |

**ಷರತ್ತುಗಳು:**

1. ಮೇಲ್ಕಂಡ ಹುದ್ದೆಗಳು ಭರ್ತಿಯಾದ ನಂತರ ಅತಿಥಿ ಶಿಕ್ಷಕರ ನೇಮಕಾತಿಯನ್ನು ಸ್ಥಗಿತಗೊಳಿಸುವುದು;
2. ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ 20 ಸ್ನಾತಕೋತ್ತರ ಕೋರ್ಸುಗಳು ಚಾಲ್ತಿಯಲ್ಲಿದ್ದು, 10ಕ್ಕಿಂತ ಕಡಿಮೆ ವಿದ್ಯಾರ್ಥಿಗಳನ್ನು ಹೊಂದಿರುವ ಕೋರ್ಸುಗಳನ್ನು ಮುಕ್ತಾಯಗೊಳಿಸಿ, ಇರುವ ವಿದ್ಯಾರ್ಥಿಗಳಿಗೆ ಪರ್ಯಾಯ ವ್ಯವಸ್ಥೆ (alternative arrangement) ಕಲ್ಪಿಸುವುದು;
3. ಪ್ರಸ್ತುತ ಇರುವ 20 ಪಿಜಿ ಕೋರ್ಸುಗಳನ್ನು ಹೊರತುಪಡಿಸಿ, ಸರ್ಕಾರದ ಸಹಮತಿ ಇಲ್ಲದೇ ಯಾವುದೇ ಕೋರ್ಸುಗಳನ್ನು ಪ್ರಾರಂಭಿಸಬಾರದು;

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 290 ವೆಚ್ಚ-8/2021, ದಿನಾಂಕ: 14-06-2022 ಹಾಗೂ ಅ.ಟಿ. ಸಂ. ಆಇ 290 ವೆಚ್ಚ-8/2022, ದಿನಾಂಕ: 06-07-2022ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಶೀತಲ್.ಎಂ. ಹಿರೇಮಠ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು-1).

**ಗೆ:**

1. ಮಹಾಲೇಖಪಾಲರು (ಲೆಕ್ಕಪತ್ರ)/(ಆಡಿಟ್), ಕರ್ನಾಟಕ, ಬೆಂಗಳೂರು – 560 001.
2. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
3. ಕುಲಪತಿಗಳು/ಕುಲಸಚಿವರು/ಹಣಕಾಸು ಅಧಿಕಾರಿಗಳು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು ಜಿಲ್ಲೆ.
4. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
5. ಜಿಲ್ಲಾ ಖಜಾನಾಧಿಕಾರಿ, ಕಲಬುರಗಿ ಜಿಲ್ಲೆ
6. ಪ್ರಾದೇಶಿಕ ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಹೊಸ ಸಾರ್ವಜನಿಕ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು
7. ಪ್ರಾದೇಶಿಕ ಆಯುಕ್ತರು, ಗುಲ್ಬರ್ಗ ಜಿಲ್ಲೆ, ಕಲಬುರಗಿ.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ-8, ವಿಧಾನ ಸೌಧ.
9. ನಿಯಂತ್ರಕರು, ರಾಜ್ಯ ಲೆಕ್ಕ ಪತ್ರ ಇಲಾಖೆ, ಬೆಂಗಳೂರು

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.